RNU AIR DHARWAD

DECEMBER 12, 2024

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- 'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ – 2024' 7ನೇ ಅವೃತ್ತಿಗೆ, ದೇಶದ 51 ಕೇಂದ್ರಗಳಲ್ಲಿ ಏಕಕಾಲಕ್ಕೆ ಚಾಲನೆ.
- ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ, ಆಧಾರ್ ಜೋಡಣೆಯಾಗದ, ನರೇಗಾ ಜಾಬ್ ಕಾರ್ಡ್‌ಗಳು, ಊರ್ಜಿತ – ರಾಯಚೂರು ಸಂಸದ, ಕುಮಾರ ನಾಯಕ್.
- ಬಳ್ಳಾರಿ ಹಾಕಿ ಅಸೋಸಿಯೇಷನ್ ವತಿಯಿಂದ, ನಾಲ್ಕು ದಿನಗಳ, ಅಂತರ್ ಜಿಲ್ಲೆಗಳ ಸಬ್ ಜೂನಿಯರ್ ಹಾಕಿ ಪಂದ್ಯಾವಳಿಗೆ, ಇಂದು ಚಾಲನೆ.
- ಮುತ್ಸದ್ದಿ ರಾಜಕಾರಣಿ, ಎಸ್.ಎಂ. ಕೃಷ್ಣ ಅವರ, ಪಾರ್ಥಿವ ಶರೀರ, ಸರ್ಕಾರಿ ಗೌರವಗಳೊಂದಿಗೆ, ಪಂಚ ಮಹಾಭೂತಗಳಲ್ಲಿ ಲೀನ.

<><><>

ಈಗ ವಾರ್ತೆಗಳ ವಿವರ

<><><>

'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ –2024' 7ನೇ ಅವೃತ್ತಿಗೆ, ದೇಶದ 51 ಕೇಂದ್ರಗಳಲ್ಲಿ, ಏಕಕಾಲಕ್ಕೆ ಚಾಲನೆ ನೀಡಲಾಯಿತು. ಕೇಂದ್ರದ ಶಿಕ್ಷಣ ಖಾತೆ ಸಚಿವ ಧರ್ಮೇಂದ್ರ ಪ್ರಧಾನ್, ವರ್ಚುವಲ್ ವೇದಿಕೆಯಲ್ಲಿ, ಹೊಸ ದಿಲ್ಲಿಯಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

<><><>

ಹುಬ್ಬಳ್ಳಿಯ ಕೆ.ಎಲ್.ಇ. ವಿಶ್ವವಿದ್ಯಾಲಯದ, ಬಿ.ವ್ಹಿ.ಬಿ. ತಾಂತ್ರಿಕ ಮತ್ತು ಅಭಿಯಾಂತ್ರಿಕ ಮಹಾವಿದ್ಯಾಲಯದಲ್ಲಿ, ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ಸ್ಪರ್ಧೆ ಆಯೋಜಿತವಾಗಿತ್ತು.

ಹೊಸ ದಿಲ್ಲಿಯ, ಇನ್ನೊವೇಶನ್ ಸೆಲ್, ಪ್ರಾದೇಶಿಕ ಸಲಹೆಗಾರ, ಸೌರಭ ನಿರ್ಮಲೆ ಮಾತನಾಡಿ, 'ಆತ್ಮ ನಿರ್ಭರ ಭಾರತ' ಯೋಜನೆ ಭಾಗವಾಗಿ, ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ಆಯೋಜಿಸಲಾಗಿದೆ. ವಿಜೇತ ವಿದ್ಯಾರ್ಥಿಗಳ ತಂಡಕ್ಕೆ, ಕೇಂದ್ರದ ಜಲಶಕ್ತಿ ಸಚಿವಾಲಯ 1 ಲಕ್ಷ ರೂಪಾಯಿ ಬಹುಮಾನ ನೀಡಲಿದೆ ಎಂದರು.

<><><>

ಬೆಳಗಾವಿಯ ಶ್ರೀ ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ, ಹ್ಯಾಕಥಾನ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ, ಬೆಂಗಳೂರಿನ ಸಿ.ಎಂ.ಆರ್. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಿದ್ಯಾರ್ಥಿ ತೇಜಸ್, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ವಿದ್ಯಾರ್ಥಿ ತೇಜಸ್ ಧ್ವನಿ 33 ಸೆಕೆಂದುಗಳು

<><><>

ಕೇಂದ್ರ ಶಿಕ್ಷಣ ಸಚಿವಾಲಯದ ಇನ್ನೋವೇಶನ್ ಸೆಲ್, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಮತ್ತು ಇಂಟರ್ ಇನ್‌ಸ್ಟಿಟ್ಯೂಶನಲ್ ಇನ್‌ಕ್ಲೂಸಿವ್ ಇನ್ನೋವೇಶನ್ಸ್ ಸೆಂಟರ್, ಆಯೋಜಿಸಿದ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್‌ಗೆ, ಮೈಸೂರಿನ ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್ ನ, ಕೆಂಪೇಗೌಡ ಒಳಾಂಗಣ ಕ್ರೀಡಾ ಸಂಕೀರ್ಣದಲ್ಲಿ ಚಾಲನೆ ನೀಡಲಾಯಿತು. ವಿವಿಧ ರಾಜ್ಯಗಳಿಂದ 24 ತಂಡಗಳು ಹಾಗೂ 200 ಜನ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.

<><><>

ರಾಯಚೂರು ಮತ್ತು ಯಾದಗಿರಿ ಲೋಕಸಭಾ ಕ್ಷೇತ್ರದಲ್ಲಿ, ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿ, ಕೂಲಿ ಮಾಡುವ ಕಾರ್ಮಿಕರ, ಆಧಾರ್ ಜೋಡಣೆಯಾಗದ, ಜಾಬ್ ಕಾರ್ಡ್‌ಗಳನ್ನು ರದ್ದುಪಡಿಸಿಲ್ಲ ಎಂದು, ಕೇಂದ್ರ ಗ್ರಾಮೀಣ ಅಭಿವೃದ್ಧಿ ಖಾತೆ ಸಚಿವ ಕಮಲೇಶ ಪಾಸ್ವಾನ್ ತಿಳಿಸಿದ್ದಾರೆ. ರಾಯಚೂರು ಸಂಸದ ಜಿ. ಕುಮಾರ ನಾಯಕ್ ಅವರು ಲೋಕಸಭೆಯಲ್ಲಿ ಕೇಳಿದ ಪ್ರಶ್ನೆಗೆ, ಸಚಿವರು ಉತ್ತರಿಸಿ, ಪ್ರಸಕ್ತ 2024ರ ಜನೆವರಿಯಿಂದ, ನರೇಗಾ ಕಾರ್ಮಿಕರ ವೇತನ ಪಾವತಿಗೆ, ಆಧಾರ್ ಕಡ್ಡಾಯಗೊಳಿಸಲಾಗಿದೆ. ಉದ್ದೇಶ ಪಾರದರ್ಶಕತೆ ಖಾತ್ರಿ ಪಡಿಸುವುದಾಗಿದೆ. ಈ ವರ್ಷ ಹೊಸದಾಗಿ 36 ಲಕ್ಷದ 21 ಸಾವಿರ ಜಾಬ್ ಕಾರ್ಡ್‌ಗಳನ್ನು ವಿತರಿಸಲಾಗಿದೆ ಎಂದರು.

<><><>

ರಾಯಚೂರು ಕೃಷಿ ವಿಶ್ವವಿದ್ಯಾಲಯ, ಕೀಟಗಳನ್ನು ಬಳಸಿ, ಖಾದ್ಯಗಳನ್ನು ತಯಾರಿಸುವ ನಿಟ್ಟಿನಲ್ಲಿ, ವಿಶೇಷ ಸಂಶೋಧನೆ ಕೈಗೊಂಡಿದೆ. ವಿಸ್ಮಯಕಾರಿ ಕೀಟ ಪ್ರಪಂಚ ಹೆಸರಿನಲ್ಲಿ, ಇತ್ತೀಚೆಗೆ ಜರುಗಿದ ಕೃಷಿ ಮೇಳದಲ್ಲಿ ಆಯೋಜಿಸಿದ್ದ, ಪ್ರದರ್ಶಿನಿ ಎಲ್ಲರ ಗಮನ ಸೆಳೆಯಿತು. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ರಾಯಚೂರು ಕೃಷಿ ವಿಶ್ವವಿದ್ಯಾಲಯದ, ಕೀಟಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ, ಡಾಕ್ಟರ್ ಎ.ಜಿ ಶ್ರೀನಿವಾಸ.

<><><>

ಡಾ. ಎ.ಜಿ. ಶ್ರೀನಿವಾಸ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕೋಲಾರ ಜಿಲ್ಲೆ, ಮುಳಬಾಗಿಲು ತಾಲೂಕಿನ, ಎಂ.ಕೊತ್ತೂರು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ನಾಲ್ವರು ವಿದ್ಯಾರ್ಥಿಗಳು, ಮುರಡೇಶ್ವರ ಕಡಲ ತೀರದಲ್ಲಿ ಮುಳುಗಿ ಸಾವನ್ನಪ್ಪಿದ್ದು, ಮೃತರ ಕುಟುಂಬಗಳಿಗೆ ತಲಾ 5 ಲಕ್ಷ ರೂಪಾಯಿ ಪರಿಹಾರವನ್ನು ನೀಡಲು, ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಾಪಗಳೊಂದಿಗೆ, ಜಿಲ್ಲಾಧಿಕಾರಿ ಅಕ್ರಂ ಪಾಷಾ ಅವರಿಗೆ, ಸೂಚಿಸಿದ್ದಾರೆ.

<><><>

"ಪ್ರವಾಸದ ಸಂದರ್ಭದಲ್ಲಿ, ಶಿಕ್ಷಕರು ಮಕ್ಕಳ ಬಗ್ಗೆ ಹೆಚ್ಚು ಜಾಗೃತೆ ವಹಿಸಬೇಕು. ಅಪಾಯಕಾರಿ ಸ್ಥಳಗಳಿಗೆ ಭೇಟಿ ನೀಡುವಾಗ, ಮಕ್ಕಳ ಮೇಲೆ ನಿಗಾ ಇಡಬೇಕು. ಮಕ್ಕಳನ್ನು ಕಳೆದುಕೊಂಡ ಹೆತ್ತವರ ನೋವು, ಸಂಕಟ, ಸಹಿಸಲು ಅಸಾಧ್ಯ. ಇಂತಹ ಅವಘಡಗಳು ಮತ್ತೆಂದೂ ಸಂಭವಿಸದಿರಲಿ ಎಂದು ಪ್ರಾರ್ಥಿಸುವುದಾಗಿ, ಮುಖ್ಯಮಂತ್ರಿ ಕಂಬನಿ ಮಿಡಿದಿದ್ದಾರೆ.

<><><>

ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಸುರೇಶ ಮಾತನಾಡಿ, ಜಿಲ್ಲಾಡಳಿತ, ನಾಲ್ವರು ಮಕ್ಕಳ ಪಾರ್ಥಿವ ಶರೀರದ ಅಂತ್ಯಕ್ರಿಯೆಗೆ ವ್ಯವಸ್ಥೆ ಮಾಡಲಿದ್ದು, ಇಂದು ನಾಲ್ಕು ಕುಟುಂಬಗಳಿಗೆ ಪರಿಹಾರದ ಚೆಕ್ ನೀಡುವುದಾಗಿ, ತಿಳಿಸಿದ್ದಾರೆ.

<><><>

ನಾಲ್ವರು ವಿದ್ಯಾರ್ಥಿಗಳು ಜಲ ಸಮಾಧಿಯಾದ ಹಿನ್ನೆಲೆ, ಉತ್ತರಕನ್ನಡ ಜಿಲ್ಲೆ, ಮುರುಡೇಶ್ವರದ ಸಮುದ್ರ ತೀರದಲ್ಲಿ, ಜಿಲ್ಲಾಡಳಿತ ಪ್ರವಾಸಿಗರಿಗೆ ತಾತ್ಕಾಲಿಕ ನಿರ್ಬಂಧ ವಿಧಿಸಿದ್ದಾಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ನಾರಾಯಣ, ಮಾಹಿತಿ ನೀಡಿದ್ದಾರೆ.

<><><>

ಮುತ್ಸದ್ದಿ ರಾಜಕಾರಣಿ, ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ, ಪಾರ್ಥಿವ ಶರೀರದ ಅಂತ್ಯಕ್ರಿಯೆ, ಅವರ ಹುಟ್ಟೂರು, ಮಂಡ್ಯ ಜಿಲ್ಲೆ, ಮದ್ದೂರು ತಾಲೂಕಿನ, ಸೋಮನಹಳ್ಳಿಯಲ್ಲಿ, ಸರ್ಕಾರಿ ಗೌರವಗಳೊಂದಿಗೆ ನಿನ್ನೆ ಸಂಜೆ ನೆರವೇರಿತು. ಸೋಮನಹಳ್ಳಿ ಸಮೀಪ, ಕೃಷ್ಣ ಅವರ ಒಡೆತನದ ಕಾಫಿ ಡೇ ಬಳಿಯ ಮೈದಾನದಲ್ಲಿ, ಒಕ್ಕಲಿಗ ಸಮುದಾಯದ ವಿಧಿ–ವಿಧಾನಗಳಂತೆ, ಭಾನು ಪ್ರಕಾಶ್ ಶರ್ಮಾ ಅವರ ನೇತೃತ್ವದಲ್ಲಿ, ಅಂತಿಮ ವಿಧಿ ವಿಧಾನ ನೆರವೇರಿತು. ಕೃಷ್ಣ ಅವರ ಮೊಮ್ಮಗ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅಳಿಯ ಅಮರ್ತ್ಯ ಹೆಗಡೆ, ಸಂಜೆ 5.30ಕ್ಕೆ ಚಿತೆಗೆ ಅಗ್ನಿ ಸ್ಪರ್ಶ ಮಾಡಿದರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಕೇಂದ್ರ ಸರ್ಕಾರದ ಪ್ರತಿನಿಧಿಯಾಗಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪಾಲ್ಗೊಂಡು, ಅಂತಿಮ ನಮನ ಸಲ್ಲಿಸಿದರು.

<><><>

ಶ್ರೀ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಶಾಖಾ ಮಠಗಳ ಸ್ವಾಮೀಜಿಗಳು, ಕೃಷ್ಣ ಅವರ ಕುಟುಂಬಕ್ಕೆ ಸಾಂತ್ವನ ಹೇಳಿದರು.

<><><>

ಮಂಡ್ಯದಲ್ಲಿ ಆಯೋಜಿತ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಗೊ.ರೂ. ಚನ್ನಬಸಪ್ಪ ಸಂತಾಪ ಸೂಚಿಸಿದ್ದಾರೆ. ಎಸ್.ಎಂ ಕೃಷ್ಣ ಅವರಿಗೆ ಕನ್ನಡ ನಾಡು–ನುಡಿಯ ಬಗ್ಗೆ, ಅಪಾರ ಪ್ರೀತಿ ಇತ್ತು ಎಂದು, ಕಂಬನಿ ಮಿಡಿದಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆ, ಸಿದ್ದಾಪುರದ ಬಾಳೇಸರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ವಿದ್ಯಾರ್ಥಿಗಳಿಗೆ ಮಣ್ಣಿನ ಆರೋಗ್ಯ ಕಾಪಾಡುವ ಮಹತ್ವದ ಕುರಿತು ಹಾಗೂ ಮಣ್ಣಿನ ಪ್ರಾಮುಖ್ಯತೆಯ ಬಗ್ಗೆ, ಬೆಂಗಳೂರಿನ ಯೂತ್ ಫಾರ್ ಸೇವಾ ಸಂಸ್ಥೆಯ, ಪರಿಸರ ವಿಭಾಗದ ಮುಖ್ಯಸ್ಥ ಉಮಾಪತಿ ಭಟ್ ಕೆ.ವಿ. ಅವರು, ವಿಶೇಷ ಪ್ರಾತ್ಯಕ್ಷಿಕೆ ಮೂಲಕ ತಿಳಿಸಿದರು. ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ನೆಲಮೂಲದ ಸಸ್ಯ ವಿಜ್ಞಾನಿ, ಉಮಾಪತಿ ಭಟ್ ಕೆ.ವಿ.

<><><>

ಉಮಾಪತಿ ಭಟ್ ಕೆ.ವಿ. ಧ್ವನಿ 25 ಸೆಕೆಂದುಗಳು

<><><>

ಬಳ್ಳಾರಿ ಹಾಕಿ ಕ್ರೀಡಾಂಗಣದಲ್ಲಿ, ಹಾಕಿ ಅಸೋಸಿಯೇಷನ್ ಇಂದಿನಿಂದ ನಾಲ್ಕು ದಿನಗಳ ಕಾಲ, ಅಂತರ್ ಜಿಲ್ಲೆಗಳ ಸಬ್ ಜೂನಿಯರ್ ಹಾಕಿ ಪಂದ್ಯಾವಳಿ ಆಯೋಜಿಸಿದೆ ಎಂದು, ಅಸೋಸಿಯೇಷನ್ ಅಧ್ಯಕ್ಷ ಆರ್.ವಿ.ನಾಗಾರ್ಜುನ ರೆಡ್ಡಿ ತಿಳಿಸಿದ್ದಾರೆ. ಹಾಕಿ ಕ್ರೀಡಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಧಾರವಾಡ, ಬೆಳಗಾವಿ, ರಾಯಚೂರು, ಬಾಗಲಕೋಟೆ, ಕಲಬುರಗಿ, ಹಾವೇರಿ, ಗದಗ ಹಾಗೂ ಬಳ್ಳಾರಿ ಸೇರಿದಂತೆ, ಎಂಟು ಜಿಲ್ಲೆಗಳ ತಂಡಗಳು, ಈ ಪಂದ್ಯಾವಳಿಯಲ್ಲಿ ಭಾಗವಹಿಸಲಿವೆ. ಲೀಗ್–ಕಂ–ನಾಕೌಟ್ ಮಾದರಿಯಲ್ಲಿ, ಪಂದ್ಯಗಳು ಜರುಗಲಿವೆ ಎಂದರು.

<><><>

ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಗ್ರೇಸಿ ಅವರು, ಇಂದು ಪಂದ್ಯಾವಳಿ ಉದ್ಘಾಟಿಸಲಿದ್ದಾರೆ.

<><><>

ಅರ್ಜುನ ಪ್ರಶಸ್ತಿ ಪುರಸ್ಕೃತ ಕ್ರೀಡಾಪಟು, ವಿ.ಆರ್.ರಘುನಾಥ ಸಮಾರೋಪ ಸಮಾರಂಭದಲ್ಲಿ, ವಿಜೇತ ತಂಡಗಳಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

<><><>

ಕೊಡಗು ಜಿಲ್ಲೆ, ಕುಶಾಲ ನಗರದ, 10 ವರ್ಷದ ಆಜ್ಞಾ ಅಮಿತ್, ಇಂಡೋನೇಷಿಯಾದಲ್ಲಿ ನಡೆದ, 10 ವರ್ಷದೊಳಗಿನ Mixed martial arts ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ, ಭಾರತವನ್ನು ಪ್ರತಿನಿಧಿಸಿ, ಕಿರಿಯ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಕೊಡಗು ಜಿಲ್ಲಾ ಉಸ್ತುವಾರಿ ಸಚಿವ, ಎನ್.ಎಸ್. ಬೋಸರಾಜು ಅವರು ಆಜ್ಞಾ ಅವರನ್ನು ಅಭಿನಂದಿಸಿದ್ದು, ಸಾಧನೆಗೆ ವಯಸ್ಸಿನ ಮಿತಿ ಇಲ್ಲ. ಪ್ರತಿಭೆ ಯಾರ ಸ್ವತ್ತೂ ಅಲ್ಲ. ಜಗತ್ತೇ ತಿರುಗಿ ನೋಡುವ ಸಾಧನೆ ಮಾಡಬಹುದು ಎನ್ನುವುದಕ್ಕೆ ಪುಟ್ಟ ಬಾಲಕಿ ಉದಾಹರಣೆ ಎಂದು, ಎಕ್ಸ್ ಜಾಲತಾಣದಲ್ಲಿ ಶುಭಾಶಯ ಕೋರಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ – 2024' 7ನೇ ಅವೃತ್ತಿಗೆ, ದೇಶದ 51 ಕೇಂದ್ರಗಳಲ್ಲಿ ಏಕಕಾಲಕ್ಕೆ ಚಾಲನೆ.

- ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ, ಆಧಾರ್ ಜೋಡಣೆಯಾಗದ, ನರೇಗಾ ಜಾಬ್ ಕಾರ್ಡ್‌ಗಳು, ಊರ್ಜಿತ – ರಾಯಚೂರು ಸಂಸದ, ಕುಮಾರ ನಾಯಕ್.

- ಬಳ್ಳಾರಿ ಹಾಕಿ ಅಸೋಸಿಯೇಷನ್ ವತಿಯಿಂದ, ನಾಲ್ಕು ದಿನಗಳ, ಅಂತರ್ ಜಿಲ್ಲೆಗಳ ಸಬ್ ಜೂನಿಯರ್ ಹಾಕಿ ಪಂದ್ಯಾವಳಿಗೆ, ಇಂದು ಚಾಲನೆ.

- ಮುತ್ಸದ್ದಿ ರಾಜಕಾರಣಿ, ಎಸ್.ಎಂ. ಕೃಷ್ಣ ಅವರ, ಪಾರ್ಥಿವ ಶರೀರ, ಸರ್ಕಾರಿ ಗೌರವಗಳೊಂದಿಗೆ, ಪಂಚ ಮಹಾಭೂತಗಳಲ್ಲಿ ಲೀನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ